

**ಎಡದಿಂದ ಬಲಕ್ಕೆ:**

1. ಸದ್ಭಾವನೆಯಿಂದ ಸಲ್ಲಿಸಿದ ಸೇವೆಗೆಂದು ಗೌರವಧನ 4
3. ಸಂಪ್ರದಾಯಸ್ಥರ ಹಾಗೆಯೇ ನಟಿಸಬೇಕಾಗಿ ಬಂದ ಸಂದರ್ಭ ಅದು 3
4. ಚೋರರನ್ನೆಲ್ಲ ಆಕರ್ಷಿಸಿ ಹಿಡಿಯಲು ಇದು ತಕ್ಕ ನಿರ್ಮಿತಿ 3
6. ತುಳಿದು ಹಾಳು ಮಾಡಬಾರದು ಎಂಬುದನ್ನು ಅರ್ಥವಾಗುವಂತೆ ಮಾಡು 4
7. ನೈವೇದ್ಯವಾದದ್ದನ್ನೆಲ್ಲ ಸ್ವೀಕರಿಸಬೇಕೆಂದು ವಿನಂತಿ 3
9. ಗುಂಪುಗೂಡಿದ ಎಲ್ಲರಿಗೂ ತಾಂಬೂಲದ ಜೊತೆಗೆ ತಣ್ಣಗಿನ ನೀರು 4
11. ಖರ್ಜೂರ ಮಾರಲು ತಕ್ಕದ್ದು ದೀರ್ಘ ಬಿಡುವಿನ ಸಮಯ 4
13. ಚಿಕ್ಕವರೇ ಸೇರಿ ತಯಾರಿಸಿದ್ದರೂ ನಾಲಿಗೆಗೆ ಎಷ್ಟು ಹಿತಕರ ನೋಡಿ 4
15. ಮುಕುಂದನಿಗೆ ಯಾವಾಗಲೂ ಪ್ರಿಯವಾದದ್ದು ಗೆಡ್ಡೆಗೆಣಸು 4
17. ಬುಗುರಿ ಮಾರಿಯೇ ಜೀವಿಸುವವನು ಒಡವನೇ ತಾನೇ? 3
18. ವಾರಿಧಿಯ ತಡಿಯಲ್ಲಿ ಎಂಥ ಸುಂದರ ಬಳ್ಳಿ! 3
19. ಮುಷ್ಕರ ನಿರತರೆಲ್ಲ ಹಣ ಸಿಕ್ಕೊಡನೆ ಹೊರ ನಡೆದದ್ದಾಯಿತು 4

**ಮೇಲಿಂದ ಕೆಳಕ್ಕೆ:**

1. ಸೇವಂತಿಗೆಯ ಬೆಲೆ ಹೆಚ್ಚಾಗಿರುವುದೇ ಸದ್ಯದ ವಿಷಯ 3
2. ನೇರಿಳೆ ಮರದ ಬಳಿ ಬಿಸಿಲಲ್ಲಿ ಅದರದೇ ಛಾಯೆ 3
3. ಸಂಪ್ರದಾಯದ ಪ್ರಕಾರ ಎಲ್ಲರಿಗೂ ಹಂಚಲು ದೇವಾರ್ಪಿತ ವಸ್ತು 3
5. ಪುನಃ ಪುನಃ ಆ ಘಟನೆಯದೇ ಸ್ಮರಣೆ 3
7. ಆ ಊರಿಗೆ ನೇರ ದಾರಿಯೇ ಇಲ್ಲವೆಂಬ ಸುದ್ದಿ ಬುಡವೇ ಇಲ್ಲದ್ದು 4
8. ಬಲ್ಲವರನ್ನೆಲ್ಲ ಬೆರಗಾಗಿಸಿತು ಬಲಿಷ್ಠ ಭೂ ಸೇನೆ 4
9. ಬೆಲ್ಲವನ್ನು ತುಂಬಿ ತರುವಾಗ ಬೀಸತೊಡಗಿತ್ತು ತಣ್ಣಗಿನ ಗಾಳಿ 4
10. ಆತುರದಲ್ಲಿ ಅಲಕ್ಷ್ಯ ಬೇಡ ; ಅದು ನೂರು ಸಾವಿರದಷ್ಟಿದೆ 4
12. ಕಾಳು ಕಡ್ಡಿ ಕೊಳ್ಳುವಾಗ ಏನು ಈ ಸಮರ? 3
14. ಅವರ ಕಚೇರಿಯ ಸನಿಹದಲ್ಲೇ ಸಿಗುತ್ತದೆ, ಕಾಫಿಗೆ ಬೆರೆಸುವ ವಸ್ತು 3
15. ಕಬ್ಬಿನ ವ್ಯಾಪಾರದಿಂದ ಭಾರೀ ನಷ್ಟವಾಯಿತೆಂದು ಕಣ್ಣೀರು 3
16. ಹಣವಿಲ್ಲದಿದ್ದರೂ ತರಲೇಬೇಕು ಸ್ವಲ್ಪ ಉಪ್ಪು 3

---

**05-12-2019 ಉತ್ತರಗಳು**

ಎಡದಿಂದ ಬಲಕ್ಕೆ:

1. ಉಪದೇಶ 3. ವ್ಯಾಪಾರ 4. ಮತ್ಸರ 6. ಗಟ್ಟಿತನ 7. ಪಾರಂಗತ 9. ಆಂತರಿಕ 11. ಸಡಗರ 13. ನವವಿಧ 15. ಉದಾಸೀನ 17. ರಮಿಸು 18. ಡಬರಿ 19. ಕುಟಿಲತೆ

ಮೇಲಿಂದ ಕೆಳಕ್ಕೆ:

1. ಉರಗ 2. ಶಮನ 3. ವ್ಯಾಸಂಗ 5. ರಹಿತ 7. ಪಾದರಸ 8. ತರತರ 9. ಆಂದೋಳನ 10. ಕಡುಗಂಧ 12. ಗಭೀರ (= ಆಳ) 14. ವಯ್ಯಾರಿ 15. ಉಸುಕು 16. ನಡತೆ

ಪ್ರಶ್ನಾ ಂಕಣ

# ಚಿಂಪಾಂಜಿ: ನಮಗೆಷ್ಟು ಸಂಬಂಧಿ?

ಚಿಂಪಾಂಜಿ: ವಾಸ್ತವವಾಗಿ ಇಡೀ ಪ್ರಾಣಿ ಪ್ರಪಂಚದಲ್ಲಿ ಅದೇ ನಮ್ಮ ಅತ್ಯಂತ ನಿಕಟ ಸಂಬಂಧಿ! ಪ್ರಸ್ತುತ ಅಸ್ತಿತ್ವದಲ್ಲಿರುವ ಗೊರಿಲ್ಲ, ಚಿಂಪಾಂಜಿ, ಬೋನೋಬೊ, ಒರಾಂಗೊಟಾನ್ ಮತ್ತು ಗಿಬ್ಬನ್ ಈ ಐದು ವಾನರ ವಿಧಗಳೂ ನಮಗೆ ಸಂಬಂಧಿಗಳೇ ಹೌದಾದರೂ ಚಿಂಪಾಂಜಿಯೇ ನಮಗೆ ಅತ್ಯಂತ ಹತ್ತಿರದ, 'ದಾಯಾದಿ' ಎನಿಸುವಷ್ಟು ಹತ್ತಿರದ, ಸಂಬಂಧಿ.

ಹಾಗೆಂದು ನಮ್ಮ ಆದಿ ಪೂರ್ವಜರು ಚಿಂಪಾಂಜಿಗಳಿಂದಲೇ ವಿಕಸನ ಗೊಂಡದ್ದೆಂದು ಭಾವಿಸಿಬಿಡಬೇಡಿ. ಸಂಶೋಧನೆಗಳು ಸ್ಪಷ್ಟಪಡಿಸಿರುವಂತೆ ಚಿಂಪಾಂಜಿಗಳು ಮತ್ತು ನಮ್ಮ ಆದಿ ಪಿತಾಮಹರು ಒಂದೇ ಪ್ರಾಚೀನ ಪೂರ್ವಜ ಪ್ರಭೇದದಿಂದ ಕವಲೊಡೆದು, ನಿಧಾನವಾಗಿ, ಪ್ರತ್ಯೇಕವಾಗಿ ವಿಕಸನಗೊಂಡವು, ಅಷ್ಟೆ. ಈಗ್ಗೆ ಸುಮಾರು ಹದಿಮೂರು ದಶಲಕ್ಷ ವರ್ಷ ಹಿಂದೆ ಆರಂಭಗೊಂಡ ಈ ಪ್ರತ್ಯೇಕತೆ ಈಗ್ಗೆ ಏಳು ದಶಲಕ್ಷ ವರ್ಷ ಹಿಂದಿನ ಹೋಮಿನಿನ್ ಪ್ರಭೇದ 'ಸಹಲ್ಯಾಂಥ್ರೋಪಸ್ ಟ್ಯಾಖಿಡೆನ್ಸಿಸ್'ನಲ್ಲಿ ಸ್ಪಷ್ಟವಾಗಿ ಗೋಚರಿಸತೊಡಗಿತ್ತು. ಈಗ್ಗೆ 5.5 ದಶಲಕ್ಷ ವರ್ಷ ಹಿಂದಿನ 'ಆರ್ಡಿಪಿಥೀಕಸ್ ರಾಮಿಡಸ್' ಪ್ರಭೇದದಲ್ಲಿ ಮತ್ತೂ ಸ್ಫುಟವಾದ ಈ ವಿಭಿನ್ನತೆ ಈಗ್ಗೆ 4.5 ರಿಂದ 4 ದಶಲಕ್ಷ ವರ್ಷ ಹಿಂದಿನ ಸುಮಾರಿಗೆ ಪೂರ್ವ ಮಾನವ ಪ್ರಭೇದ 'ಆಸ್ಟ್ರಲೋಪಿಥೀಕಸ್ ಅನಮೆನ್ಸಿಸ್' ಮತ್ತು ಚಿಂಪಾಂಜಿ ಪ್ರಭೇದ 'ಪಾನ್ ಟ್ರೋಗ್ಲೋಡೈಟ್ಸ್' ಗಳಾಗಿ ಸಂಪೂರ್ಣಗೊಂಡಿತ್ತು.

ಮೇಲ್ನೋಟಕ್ಕೆ ಚಿಂಪಾಂಜಿಗಳು ಸಂಪೂರ್ಣವಾಗಿ ನಮ್ಮನ್ನು ಹೋಲುವುದಿಲ್ಲ; ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳಲ್ಲಿ ಅವು ನಮಗೆ ಸರಿಸಾಟಿಯಾಗಿಲ್ಲ. ಆದರೂ 'ಡಿಎನ್‌ಎ' ವಿಶ್ಲೇಷಣೆಯ ಪ್ರಕಾರ




ಈ ವಾನರರು ಜೈವಿಕವಾಗಿ ನಮ್ಮನ್ನೇ ಶೇಕಡ 98ರಷ್ಟು ಹೋಲುತ್ತವೆ! ಹಾಗೆಂದರೆ, ನಮಗಿರುವ ಎಲ್ಲ ಗುಣ, ಲಕ್ಷಣ, ಸಾಮರ್ಥ್ಯಗಳು ಅವುಗಳಲ್ಲೂ ಕ್ಷೀಣ ಪ್ರಮಾಣದಲ್ಲಾದರೂ ಇದ್ದೇ ಇವೆ ( ಚಿತ್ರ 1).

ಈ ಕಾರಣದಿಂದಲೇ ಚಿಂಪಾಂಜಿಗಳ ಹೇರಳ ಬಾಹ್ಯ ಚಟುವಟಿಕೆಗಳು ನಮ್ಮನ್ನೇ ಅನುಕರಿಸುವಂತೆ ಕಾಣುತ್ತವೆ. ಅಷ್ಟೇ ಏಕೆ, ಚಿಂಪಾಂಜಿಗಳು ನಮ್ಮಂತೆಯೇ ಬಹು ವಿಧ ಭಾವ ಭಾವನೆಗಳನ್ನು ಎಂದರೆ, ಗಾಢ ಪ್ರೀತಿ (ಚಿತ್ರ 2), ಸಂತಸ, ನಾಚಿಕೆ (ಚಿತ್ರ 3), ಕೋಪ, ಚಿಂತೆ, ಭಯ, ಕ್ರೌರ್ಯ, ಸ್ವಾರ್ಥ, ಸಹಕಾರ, ವಿವೇಚನೆ,.. ಇತ್ಯಾದಿಗಳನ್ನು ಹೊಂದಿವೆ, ಪ್ರಕಟಿಸುತ್ತವೆ. ವಿಶೇಷ ಕ್ಲಿಷ್ಟ ಪರಿಸ್ಥಿತಿಗಳು ಒದಗಿದಾಗ ಆಲೋಚನೆ, ಚಿಂತನೆ (ಚಿತ್ರ 4) ಮಾಡುತ್ತವೆ; ಸಮಸ್ಯಾ ಪರಿಹಾರಕ್ಕೆ ಯೋಜನೆಗಳನ್ನು ರೂಪಿಸುತ್ತವೆ; ಕಾರ್ಯ ಸಾಧನೆಗೆ ಸಾಧನಗಳನ್ನು ಬಳಸುತ್ತವೆ; ಅಂಥ ತಂತ್ರಗಾರಿಕೆಗಳನ್ನು ಇತರರಿಗೂ ಕಲಿಸುತ್ತವೆ. ಅಷ್ಟೇ ಅಲ್ಲದೆ, ಈ ವಾನರರು ಮನುಷ್ಯರ ಸಂಜ್ಞಾ ಭಾಷೆಯನ್ನೂ ಅಷ್ಟಿಷ್ಟು ಕಲಿಯಬಲ್ಲವು; ನಮ್ಮ ಆಡು ಭಾಷೆಯ ಹಲವಾರು ಪದಗಳನ್ನೂ ಕಲಿತು ಬಳಸಬಲ್ಲವು!

ಹಾಗೆಲ್ಲ ಆಗಿರುವುದರಿಂದಲೇ ಚಿಂಪಾಂಜಿ ನಮ್ಮ ಅತ್ಯಂತ ನಿಕಟ ಸಂಬಂಧಿ!

■ ಎನ್. ವಾಸುದೇವ್